**ವೀಣಾಗಾನ ವಿಶಾರದೆ, ವಿದುಷಿ ತಿರುಮಲೆ ಶಾರದಾ ನೂರಾರು ಶಿಷ್ಯರನ್ನು ರೂಪಿಸಿದ ಕೀರ್ತಿಶೇಷರು. ಹತ್ತು ವರ್ಷಗಳ ಕಾಲ ಅವರು ಸಂಘಟಿಸಿದ ಸಂಗೀತೋತ್ಸವಗಳು ನಾಡಿನ ಹಿರಿ–ಕಿರಿಯ ಸಂಗೀತ ಸಾಧಕರಿಗೆ ವೇದಿಕೆ ಒದಗಿಸಿದ್ದವು. 'ಶಿಕ್ಷಕರ ದಿನ'ದ ಮಾಸದಲ್ಲಿ ಶಿಷ್ಯರ ಪಾಲಿಗೆ ಅಂತಃಕರಣವೇ ಮೂರ್ತಿವೆತ್ತಂತೆ ಕಾಣುತ್ತಿದ್ದ ಶಾರದಾ ಅವರ ಸ್ಮರಣೆ.**

ಗುರುಗಳಲ್ಲಿ ಸ್ವಾಭಿಮಾನ ಇರಬೇಕಾದುದಕ್ಕಿಂತ ಹೆಚ್ಚಾಗೇ ಇತ್ತು. ಕಡೆ ಕಡೆಗೆ ಅದು ವೈರಾಗ್ಯದ ಸ್ವರೂಪವನ್ನೂ ಪಡೆದಂತಿತ್ತು. ಪ್ರತಿಷ್ಠಿತ ಸಂಗೀತ ಸಂಸ್ಥೆಗಳು ದಿನಗಟ್ಟಲೆ ನಡೆಯುವ ಸಮ್ಮೇಳನಕ್ಕೆ ಸರ್ವಾಧ್ಯಕ್ಷರನ್ನಾಗಿ ಮಾಡಿ ಬಿರುದು ನೀಡುತ್ತೇವೆಂದು ಆಹ್ವಾನಿಸಿದರೆ, 'ಅದೆಲ್ಲ ನನಗೆ ಬೇಡ' ಎಂದು ನಿರಾಕರಿಸಿದರು. ಎಂದೂ ಯಾರ ಮುಲಾಜಿಗೂ ಸಿಲುಕುವ ಆಸಾಮಿ ಅವರಾಗಿರಲಿಲ್ಲ.

### ನಿಷ್ಠುರ ನಡೆ

ತಪ್ಪು ಕಂಡರೆ ಹಿಂದೆ ಮುಂದೆ ನೋಡದೆ ಕಡ್ಡಿ ಮುರಿದಂತೆ ಹೇಳಿಬಿಡುವ ಸ್ವಭಾವ! ಇನ್ನು ಸಂಗೀತದ ಗುರುಗಳು ಸ್ವತಃ ತಪ್ಪು ಮಾಡಿಬಿಟ್ಟರೆ... 'ನೋಡಿ, ನಿಮ್ಮ ಈ ರಾಗ ನಿರ್ವಹಣೆಯಲ್ಲಿ ಇಂತಿಂಥ ಪ್ರಮಾದಗಳು ಇದ್ದವು. ಇದು ರಾಗದ ವ್ಯಕ್ತಿತ್ವಕ್ಕೇ ಅಪಚಾರ. ನೀವೇ ತಪ್ಪು ಮಾಡಿಬಿಟ್ಟರೆ, ವಿದ್ಯಾರ್ಥಿಗಳೂ ಅದನ್ನೇ ಕಲಿಯೋಲ್ವೆ?' ಹೀಗೆ ಕಡ್ಡಿಮುರಿದಂತೆ ಹೇಳಿಬಿಡುತ್ತಿದ್ದರು. ಇನ್ನು ವಿಚಾರ ಸಂಕಿರಣಗಳಲ್ಲಿ, 'ಶಾರದಾ ಮೇಡಂ ಇದ್ದಾರೆ' ಅಂದರೆ ಉಳಿದ ಉಪನ್ಯಾಸಕರಿಗೆ ಹೆಚ್ಚಿನ ಜವಾಬ್ದಾರಿ.

ಯಾವುದೋ ಮಾತಿನ ಸಂದರ್ಭದಲ್ಲಿ ಅವರೊಮ್ಮೆ, 'ಭಾರತಿ ಮಾಡೋ ಮೈಸೂರು ಪಾಕ್ ಚೆನ್ನಾಗಿರುತ್ತೆ' ಅಂದರು. ಉಬ್ಬಿದ ನಾನು ಮನೆಗೆ ಬಂದೊಡನೆ ಅದನ್ನು ತಯಾರಿಸಿದೆ. ಮರುದಿನ ಪಾಠಕ್ಕೆ ಹೋದವಳು ಡಬ್ಬಿ ಕೈಲಿಟ್ಟೆ. 'ಏನಿದು?' ಅಂದರು, ಹುಬ್ಬು ಗಂಟಿಕ್ಕಿ. 'ಮೈಸೂರ್ ಪಾಕ್' ಅಂದೆ ಹೆದರುತ್ತ. 'ಭಾರತಿ, ನೀವು ಮಾಡುವ ಈ ಸಿಹಿ ನಂಗಿಷ್ಟ. ನೀವು ಚೆನ್ನಾಗಿ ಮಾಡ್ತೀರಿ ಅನ್ನೋದೂ ನಿಜ. ಆದರೆ ಇದನ್ನು ಮಾಡಲು ವಿನಿಯೋಗಿಸಿದ ಸಮಯದಲ್ಲಿ ವೀಣೆ ಅಭ್ಯಾಸ ಮಾಡಿದ್ದರೆ ನಂಗೆ ಜಾಸ್ತಿ ಸಂತೋಷ ಆಗ್ತಿತ್ತು' ಎಂದರು. ಅಂದು ನಾನವರಿಗೆ ಕಲ್ಯಾಣಿ ರಾಗದ ಅಟ್ಟತಾಳದ ವರ್ಣವನ್ನು ಪೂರ್ತಿಯಾಗಿ ಒಪ್ಪಿಸಬೇಕಾಗಿತ್ತು. ಜೊತೆಗೆ ಪಾಠವನ್ನೂ ಅಭ್ಯಾಸ ಮಾಡಿದ್ದೇನೆ ಎಂಬುದನ್ನೂ ನಿರೂಪಿಸಲೇಬೇಕಾಗಿತ್ತು. ಹಟ ಕಟ್ಟಿ ಕೂತು ಒಂದೂ ತಪ್ಪಿಲ್ಲದೆ ನುಡಿಸಿ ಬಿಟ್ಟೆ! ಮುಖವೆಲ್ಲ ನಗುವಾದರು. 'ಸರಿ... ಯೂ ಹ್ಯಾವ್ ಅಚೀವ್ಡ್' ತಲೆದೂಗಿದರು. ನನಗೆ ಬೇಕಾದ್ದು ಸಿಕ್ಕಿತು.

### ಅಂತಃಕರಣದ ಮೂರ್ತಿ

ಒಂದು ಬೆಳಗ್ಗೆ ಇದ್ದಕ್ಕಿದ್ದಂತೆ ಮೇಡಂ ಫೋನ್ ಮಾಡಿ, ಸಂಜೆ ಮನೆಗೆ ಬರಬೇಕೆಂದು ಆದೇಶಿಸಿದರು. ಹೋದೆ. ಚಾಪೆ ಮೇಲೆ ನಗುನಗುತ್ತಾ ಕೂತಿದ್ದರು. ಮುಂದೆ ತಟ್ಟೆಯಲ್ಲಿ ಬಣ್ಣ ಬಣ್ಣದ ಬಳೆಗಳು. 'ಕೈ ನೀಡಿ' ಅಂದು, ಎರಡೂ ಕೈಗಳಿಗೆ ಹಿಡಿಸುವಷ್ಟೂ ತುಂಬಿಸಿಬಿಟ್ಟರು – 'ಬಳೆಗಳು ತಾವಾಗಿ ಒಡೆದು ಹೋಗೋವರೆಗೂ ಒಂದೂ ತೆಗೀ ಕೂಡದು' ಎನ್ನುವ ಆಜ್ಞೆಯೊಂದಿಗೆ.

ಎಂದೂ ಗಾಜಿನ ಬಳೆ ತೊಡದ ನನಗೆ ಬಣ್ಣದ ಬಳೆ ತೊಡಿಸಿ ನೋಡಿ ಆನಂದಿಸುವ ಭಾವ ಅವರಿಗೆ ಬಂತಲ್ಲ ಆ ಅಂತಃಕರಣ ದೊಡ್ಡದು. ಇನ್ನೊಮ್ಮೆ ಮಟಮಟ ಮಧ್ಯಾಹ್ನ ಅರ್ಧ ಕಿಲೋ ಮೀಟರ್ ದೂರದ ಅವರ ಮನೆಯಿಂದ ನಡೆದುಕೊಂಡು ಬಂದು ಪುಳಿಯೋಗರೆ ಕೊಟ್ಟು ಹೋಗಿದ್ದರು.

'ಶ್ರುತಿ ಟ್ರಸ್ಟ್' ಹೆಸರಲ್ಲಿ ಹತ್ತು ವರ್ಷಗಳ ಕಾಲ ಸಂಗೀತೋತ್ಸವಗಳನ್ನು ನಡೆಸಿದ ಕೀರ್ತಿ ಅವರದು. ಪಿಳ್ಳಾರಿ ಗೀತೆ ಹಾಡುವ ಮಗುವಿನಿಂದ ಹಿಡಿದು ಪ್ರಬುದ್ಧ ವಿದ್ವಾಂಸರವರೆಗೆ ಎಲ್ಲರಿಗೂ ವೇದಿಕೆಯಲ್ಲಿ ಅವಕಾಶ. ಆ ಸಂಗೀತದ ಹಬ್ಬ ಮೂರು ದಿನ ನಡೆಯುತ್ತಿತ್ತು. ಕಾಫಿ–ತಿಂಡಿ, ಸವಿ ಭೋಜನ ಧಾರಾಳ. ಎಲ್ಲಾ ಖರ್ಚನ್ನೂ ತಾವೊಬ್ಬರೇ ನಿರ್ವಹಿಸುತ್ತಿದ್ದರು. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂದು ನಗುತ್ತಿದ್ದರು.

### ಕಡೆಯ ಕರೆ

ಕಳೆದ ವರ್ಷ ಅವರಿಗೆ ಎಂಬತ್ತು ತುಂಬಿದಾಗ ಅಭಿನಂದನಾ ಸಮಾರಂಭ ಏರ್ಪಾಡಾಗಿತ್ತು. ಈ ಕುರಿತು ನನಗೆ ಮಾಹಿತಿ ಇದೆಯೋ ಇಲ್ಲವೋ ಎಂಬ ಅನುಮಾನ ಬಂದಿರಬೇಕು ಅವರಿಗೆ. ತಾವೇ ಫೋನ್ ಮಾಡಿದರು. ಧ್ವನಿ ದುರ್ಬಲವಾಗಿತ್ತು. ಸ್ವಲ್ಪ ಭಾವುಕರಾಗಿ ಮಾತಾಡಿದರು. ಇದಂತೂ ಅವರ ಸ್ವಭಾವವೇ ಅಲ್ಲ. ಅವರನ್ನು ಕಳಕೊಳ್ಳುವ ಕ್ಷಣ ಹತ್ತಿರವಾಯಿತು ಅನ್ನಿಸಿ ವೇದನೆಯಾಯಿತು.

ಕೆಲವೇ ದಿನಗಳಲ್ಲಿ ಅವರು ನಮ್ಮನ್ನಗಲಿದರು. ನಮಗೆ ಅನಾಥ ಪ್ರಜ್ಞೆ ಕವಿಯಿತು. ಕಡೆಯ ಗಳಿಗೆಗಳಲ್ಲಿ ಅವರು ತಮ್ಮ ತಾಯಿಯನ್ನು ಬಹಳ ನೆನೆಸಿಕೊಳ್ಳುತ್ತಿದ್ದರಂತೆ. ಈ ಸಂಗೀತ ಶಿಲ್ಪವನ್ನು ಇಂಥದೊಂದು ಶಿಸ್ತಿನಲ್ಲಿ ಕಡೆದು ನಿಲ್ಲಿಸಿದ ಆ ಮಹಾತಾಯಿಯ ಹೆಸರು ಲೋಕಜನನಿ. ಸ್ಮರಿಸದೆ ಮತ್ತೆ?

ಹೀಗೆ ನೆನಪಿಸಿಕೊಂಡಾಗಲೆಲ್ಲ ಗುರು ಮನಸಿನಲ್ಲಿ ಜೀವಂತವಾಗುತ್ತಾರೆ. ಕಳೆದ ವರ್ಷ ಅವರು ಭೌತಿಕವಾಗಿ ಇಲ್ಲವಾಗಿದ್ದರೂ ನನ್ನ ಭಾವಕೋಶದಲ್ಲಿ ಬೆಚ್ಚಗೆ ಕೂತಿದ್ದಾರೆ. ಸೆ. 18 ಮತ್ತೆ ಮೆಲ್ಲ ಮೆಲ್ಲನೆ ಸಮೀಪಿಸುತ್ತಿದೆ. 'ಶಿಕ್ಷಕರ ದಿನ'ದ ಮಾಸದಲ್ಲಿ ನನ್ನ ಪಾಲಿನ, ನನ್ನಂಥ ನೂರಾರು ಸಹೃದಯರ ಪಾಲಿನ 'ಶಾರದಾ ಮಾತೆ'ಯನ್ನು ನೆನಪಿಸಿಕೊಳ್ಳುವುದೇ ಒಂದು ಹಿತಕರ ಅನುಭವ.

### ಯುಗಾದಿ ಉಡುಗೊರೆ

1999ನೇ ಇಸವಿಯ ಯುಗಾದಿ. ಮೇಡಂ ಫೋನ್ ಮಾಡಿ, 'ಹಬ್ಬದ ದಿನ ನಿಮ್ಮನೇಲಿ ವೀಣೆ ನುಡಿಸ್ತೀನಿ. ಮೃದಂಗಕ್ಕೆ ವಿ.ಎಸ್. ರಾಜಗೋಪಾಲ್ ಅವರಿಗೆ ಹೇಳಿದ್ದೇನೆ' ಅಂದರು. ಅದಕ್ಕಿಂತ ಹೆಚ್ಚಿನ ಸೌಭಾಗ್ಯ ಇರಲಾರದು. ಪ್ರತಿಷ್ಠಿತ ವೇದಿಕೆಗಳಲ್ಲಿ ನುಡಿಸುವ ವಿದ್ವನ್ಮಣಿ, ನಮ್ಮ ಮನೆಯ ಪುಟ್ಟ ಹಜಾರದಲ್ಲಿ ಪ್ರಬುದ್ಧವಾದ ಕಛೇರಿಯನ್ನೇ ನಡೆಸಿಬಿಟ್ಟರು.



ಹಂಸಧ್ವನಿ ಕ್ರಿಯೇಷನ್ಸ್ ಸಂಗೀತ ಸಂಸ್ಥೆಯಿಂದ ವಿದುಷಿ ಎಂ.ಎಸ್. ಶೀಲಾ ಸ್ಮರಣಿಕೆ ನೀಡುತ್ತಿರುವುದು.